II Q

# ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560 001**

ಸಂಖ್ಯೆ:ಅ1/ಸಂ.ಪ್ರ.ಕಾ.ಕಾರ್ಯ/04/2019 ದಿನಾಂಕ:03-09-2019

## ಜ್ಞಾಪನ

ವಿಷಯ: 2019-20ನೇ ಸಾಲಿನಲ್ಲಿ ವಿದ್ಯಾರ್ಥಿ ಪ್ರೇರಣಾ ಉಪಕ್ರಮದ ಅಡಿಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇ.ಪ 02/ಯೋಯೋಕ 2019 ದಿನಾಂಕ:23/04/2019 ಮತ್ತು 03/08/2019

2) ನಿರ್ದೇಶಕರು ಮೈನಾರಿಟಿ ರವರ ಜ್ಞಾಪನ ಸಂ:ನಾ.ನೃ.ಸಂ.ನಿ.ಪ್ರ.ಸಂ.01/2019-20 ದಿನಾಂಕ: 05.07.2019

3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಸುತ್ತೋಲೆ ಸಂಖ್ಯೆ: ಯೋ(1)ಮು.ಯೋ.ಕಾ.ಹ.ಬಿ.02/2019-20 ದಿನಾಂಕ:05.08.2019.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20ನೇ ಸಾಲಿನ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನವನ್ನು ಲೆಕ್ಕ ಶೀರ್ಷಿಕೆ:2202-80-800-0-49-059 ರಡಿಯಲ್ಲಿ ಕೆ2 ಮೂಲಕ ತಾಲ್ಲೂಕುಗಳಿಗೆ "ಡಿ" ಮೋಡ್ ನಲ್ಲಿ ಹಾಗೂ ಜಿಲ್ಲಾ ಹಂತಕ್ಕೆ "ಯು" ಮೋಡ್‌ನಲ್ಲಿ ರೂ. 447 ಲಕ್ಷಗಳ ಅನುದಾನವನ್ನು ಉಪನಿರ್ದೇಶಕರು(ಆಡಳಿತ) ರವರಿಗೆ ಬಿಡುಗಡೆಗೊಳಿಸಲಾಗಿದೆ.

ಅನುಬಂಧ-1ರಲ್ಲಿ ಅನುದಾನ ಬಿಡುಗಡೆ ಮಾಡಿರುವ ವಿವರ ಅನುಂಬಂಧಿಸಿದೆ. ಅನುಬಂಧ-02 ರಲ್ಲಿ ಒದಗಿಸಿರುವ ಅನುದಾನವನ್ನು ವಿತರಿಸುವ ಹಾಗೂ ಸೆಳೆಯುವ ನಿಯಮಗಳು ಅನುಂಬಂಧಿಸಿದೆ. ಜಿಲ್ಲೆಗಳ ಸ್ಪರ್ಧೆಗೆ ಬಾಕಿ ಅನುದಾನವನ್ನು ಮುಂದಿನ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಲಾಗುವುದು.

1) ಕಾರ್ಯಕ್ರಮಗಳನ್ನು ನಿಯಾಮಾನುಸಾರ ಹಾಗೂ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವುದು.
2) ಬ್ಲಾಕ್ ಹಂತದ ಕಾರ್ಯಕ್ರಮದ ವೆಚ್ಚದ ಬಿಲ್‌ಗಳ ಮೇಲುಸಹಿಯನ್ನು ಉಪನಿರ್ದೇಶಕರು(ಆಡಳಿತ) ರವರು ಮಾಡುವುದು. ಹಾಗೂ ಜಿಲ್ಲಾಮಟ್ಟದ ವೆಚ್ಚದ ಬಿಲ್‌ಗಳ ಮೇಲುಸಹಿ ಸಂಬಂಧಪಟ್ಟ ಸಹ ನಿರ್ದೇಶಕರು.(ಆಡಳಿತ) ರವರು ಮಾಡುವುದು.
3) ಈ ಕಛೇರಿಯಿಂದ ಕಳುಹಿಸಿರುವ ಪ್ರತಿಭಾ ಕಾರಂಜಿ ಕಾರ್ಯಕ್ರಮ ಅನುಷ್ಠಾನದ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿಮಾಡಿ ಮರು ಟಪಾಲಿನಲ್ಲಿ ಕಳುಹಿಸಲು ಸೂಚಿಸಿದೆ.

ವೆಚ್ಚಗಳಿಗೆ ಸಂಬಂಧಿಸಿದಂತೆ, ಎಲ್ಲಾ ಖರೀದಿ ನಿಯಮ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ, ಆಧ್ಯಾದೇಶ–2000ದ ನಿಯಮಗಳಂತೆ ಕ್ರಮವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದೆ.

(ಕೆ.ಎಸ್.ಮಣಿ)
ನಿರ್ದೇಶಕರು
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ
ಭಾಷಾ ಶಾಲೆಗಳು, ಆಯುಕ್ತರ ಕಛೇರಿ,
ಸಾ.ಶಿ.ಇಲಾಖೆ, ಬೆಂಗಳೂರು

ಇವರಿಗೆ,

1. ವಿಭಾಗೀಯ ಎಲ್ಲಾ ಸಹನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ತುರ್ತು ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
4. ಜಿಲ್ಲಾ ಹಾಗೂ ತಾಲ್ಲೂಕು ಖಜಾನಾಧಿಕಾರಿಗಳು, ಪ್ರಥಮಾಧ್ಯತೆಯಲ್ಲಿ ಬಿಲ್ ಪುರಸ್ಕರಿಸಲು ಕೋರಿದೆ.
5. ಕಛೇರಿ ಪ್ರತಿ.

ಅನುಬಂಧ - 1

## ಜಿಲ್ಲಾವಾರು ಹಂಚಿಕೆಯಾದ ಅನುದಾನದ ವಿವರ .

1. ಪ್ರತಿ ತಾಲ್ಲೂಕಿಗೆ ನಿಗದಿಪಡಿಸಿದ ಮೊತ್ತ ರೂ.2,00,000/- II Q
2. ಪ್ರತಿ ಜಿಲ್ಲೆಗೆ ನಿಗದಿಪಡಿಸಿದ ಮೊತ್ತ ರೂ.300000/-
3. ಪ್ರತಿ ತಾಲ್ಲೂಕಿಗೆ 28,000/-ರೂ.ಗಳಂತೆ ಪ್ರಯಾಣ ಭತ್ಯೆ ಹಣವನ್ನು ಹಂಚಿಕೆ ಮಾಡಿದೆ

**ಲೆಕ್ಕ ಶೀರ್ಷಿಕೆ 2202-80-800-0-49-059**

| ಕ್ರ. ಸಂ | ಜಿಲ್ಲೆಯ ಹೆಸರು | ತಾಲ್ಲೂಕು ಸಂಖ್ಯೆ | ತಾಲ್ಲೂಕು ಹಂತಕ್ಕೆ ನಿಗದಿಪಡಿಸಿದ ಮೊತ್ತ | ಜಿಲ್ಲಾ ಹಂತಕ್ಕೆ | | ಒಟ್ಟು ಮಂಜೂರಾದ ಮೊತ್ತ |
|---|---|---|---|---|---|---|
| | | | | ನಿಗದಿ ಪಡಿಸಿದ ಮೊತ್ತ | ಪ್ರಯಾಣಭತ್ಯೆ | |
| 1 | ಬೆಂಗಳೂರು ಉತ್ತರ ಜಿಲ್ಲೆ | 04 | 800000 | 150000 | 112000 | 1062000 |
| 2 | ಬೆಂಗಳೂರು ದಕ್ಷಿಣ ಜಿಲ್ಲೆ | 05 | 1000000 | 150000 | 140000 | 1290000 |
| 3 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 04 | 800000 | 150000 | 112000 | 1062000 |
| 4 | ರಾಮನಗರ ಜಿಲ್ಲೆ | 0 | 0 | 150000 | 112000 | 262000 |
| 5 | ಕೋಲಾರ ಜಿಲ್ಲೆ | 06 | 1200000 | 150000 | 168000 | 1518000 |
| 6 | ಚಿಕ್ಕಬಳ್ಳಾಪುರ ಜಿಲ್ಲೆ | 06 | 1200000 | 150000 | 168000 | 1518000 |
| 7 | ತುಮಕೂರು ಜಿಲ್ಲೆ | 06 | 1200000 | 150000 | 168000 | 1518000 |
| 8 | ಮಧುಗಿರಿ ಜಿಲ್ಲೆ | 0 | 0 | 150000 | 112000 | 262000 |
| 9 | ಚಿತ್ರದುರ್ಗ ಜಿಲ್ಲೆ | 06 | 1200000 | 150000 | 168000 | 1518000 |
| 10 | ದಾವಣಗೆರೆ ಜಿಲ್ಲೆ | 07 | 1400000 | 140000 | 196000 | 1736000 |
| 11 | ಶಿವಮೊಗ್ಗ ಜಿಲ್ಲೆ | 00 | 0 | 150000 | 196000 | 346000 |
| 12 | ಮೈಸೂರು | 09 | 1800000 | 150000 | 252000 | 2202000 |
| 13 | ಚಾಮರಾಜನಗರ ಜಿಲ್ಲೆ | 0 | 0 | 150000 | 140000 | 290000 |
| 14 | ಮಂಡ್ಯ ಜಿಲ್ಲೆ | 08 | 1600000 | 150000 | 224000 | 1974000 |
| 15 | ಹಾಸನ ಜಿಲ್ಲೆ | 08 | 1600000 | 150000 | 224000 | 1974000 |
| 16 | ಕೊಡಗು ಜಿಲ್ಲೆ | 0 | 0 | 150000 | 84000 | 234000 |
| 17 | ದಕ್ಷಿಣ ಕನ್ನಡ ಜಿಲ್ಲೆ | 07 | 1400000 | 150000 | 196000 | 1746000 |
| 18 | ಉಡುಪಿ ಜಿಲ್ಲೆ | 05 | 1000000 | 150000 | 140000 | 1290000 |
| 19 | ಗುಲ್ಬರ್ಗಾ ಜಿಲ್ಲೆ | 08 | 1600000 | 140000 | 224000 | 1964000 |
| 20 | ಯಾದಗಿರಿ ಜಿಲ್ಲೆ | 0 | 0 | 150000 | 84000 | 234000 |
| 21 | ಬೀದರ್ | 05 | 1000000 | 140000 | 140000 | 1280000 |
| 22 | ರಾಯಚೂರು | 05 | 1000000 | 140000 | 140000 | 1280000 |
| 23 | ಕೊಪ್ಪಳ ಜಿಲ್ಲೆ | 04 | 800000 | 140000 | 112000 | 1052000 |
| 24 | ಬಳ್ಳಾರಿ ಜಿಲ್ಲೆ | 08 | 1600000 | 140000 | 224000 | 1964000 |
| 25 | ಚಿಕ್ಕೋಡಿ ಜಿಲ್ಲೆ | 08 | 1600000 | 150000 | 224000 | 1974000 |
| 26 | ಬೆಳಗಾಂ ಜಿಲ್ಲೆ | 07 | 1400000 | 140000 | 196000 | 1736000 |
| 27 | ಧಾರವಾಡ ಜಿಲ್ಲೆ | 07 | 1400000 | 150000 | 196000 | 1746000 |
| 28 | ಹಾವೇರಿ ಜಿಲ್ಲೆ | 07 | 1400000 | 150000 | 196000 | 1746000 |
| 29 | ಗದಗ ಜಿಲ್ಲೆ | 06 | 1200000 | 140000 | 168000 | 1508000 |
| 30 | ಬಾಗಲಕೋಟೆ ಜಿಲ್ಲೆ | 06 | 1200000 | 140000 | 168000 | 1508000 |
| 31 | ಬಿಜಾಪುರ ಜಿಲ್ಲೆ | 07 | 1400000 | 140000 | 196000 | 1736000 |
| 32 | ಉತ್ತರ ಕನ್ನಡ ಜಿಲ್ಲೆ | 05 | 1000000 | 138000 | 140000 | 1278000 |
| 33 | ಶಿರಸಿ | 06 | 1200000 | 150000 | 168000 | 1518000 |
| 34 | ಚಿಕ್ಕಮಗಳೂರು | 0 | 0 | 150000 | 224000 | 374000 |
| | ಒಟ್ಟು | 170 | **34000000** | **4988000** | **5712000** | **44700000** |

(ಕೆ.ಎಸ್.ಮಣಿ)
ನಿರ್ದೇಶಕರು,

ಅನುಬಂಧ-2

# ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಮತ್ತು 11, 12ನೇ ತರಗತಿಗಳ ವಿದ್ಯಾರ್ಥಿಗಳ ಬ್ಲಾಕ್, ಜಿಲ್ಲ, ರಾಜ್ಯ, ಮಟ್ಟದ ಪ್ರತಿಭಾಕಾರಂಜಿ ಮತ್ತು ಕಲೋತ್ಸವ ವಿಷಯದ ಏಕ ರೀತಿಯ ಸಾಂಸ್ಕೃತಿಕ, ಶೈಕ್ಷಣಿಕ ಸ್ಪರ್ದೆಗಳಿಗಾಗಿ ಒದಗಿಸಿರುವ ಹಣ ವಿತರಿಸುವ ಹಾಗೂ ಸೆಳೆಯುವ ನಿಯಮಗಳು.

01. ಕ್ಲಸ್ಟರ್ ಮಟ್ಟದ ಸ್ಪರ್ಧೆಗಳನ್ನು ಆಗಸ್ಟ್-2019 ರ ಮೊದಲನೇ ಹಾಗೂ ಎರಡನೇ ವಾರದೊಳಗೆ ನಡೆಸುವುದು. ಅದಕ್ಕೆ ಸಂಬಂಧಿಸಿದ ಮೊತ್ತ ಉಲ್ಲೇಖ-2 ರಂತೆ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಯಿಂದ ಪ್ರತಿ ಕ್ಲಸ್ಟರ್‌ಗೆ ರೂ.5000/-ರಂತೆ ವಲಯವಾರು ಸಂಖ್ಯೆಗೆ ಅನುಗುಣವಾಗಿ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳ ಖಾತೆಗೆ ಬ್ಯಾಂಕ್ ನೆಫ್ಟ್ ಮೂಲಕ ಬಿಡುಗಡೆ ಮಾಡಲಾಗುತ್ತದೆ. ಸದರಿ ಅನುದಾನವನ್ನು ಬಳಸಿ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರ ವಿತರಿಸಲು ಖರ್ಚುಭರಿಸುವುದು. ಬಿಡುಗಡೆ ಮಾಡಿದ ಕ್ಲಸ್ಟರ್ ಅನುದಾನದ ಮೊತ್ತಕ್ಕೆ ಬಳಕೆ ಪ್ರಮಾಣಪತ್ರವನ್ನು ಟಿಬಿಎಫ್ ಕಛೇರಿಗೆ ಸಲ್ಲಿಸುವುದು. ಸುತ್ತೋಲೆಯಲ್ಲಿ ಸೂಚಿಸಿದಂತೆ ಸ್ಪರ್ಧೆ ನಿಯಮಗಳನ್ನು ಪಾಲಿಸುವುದು.
02. ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದ ವಿಜೇತರಾದ ವಿದ್ಯಾರ್ಥಿಗಳಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುಸ್ತಕಗಳನ್ನು ಬಹಮಾನವಾಗಿ ನೀಡುವುದು. ರಾಜ್ಯ ಮಟ್ಟದ ವಿಜೇತರಿಗೆ ಪುಸ್ತಕಗಳೊಂದಿಗೆ ನಗದು ಬಹುಮಾನವನ್ನೂ ಸಹ ನೀಡುವುದು.
03. ಉಪನಿರ್ದೇಶಕರು ಜಿಲ್ಲಾ ಮಟ್ಟದ ಸ್ಪರ್ಧೆಗೆ ನಿಗಧಿಯಾದ ಮೊತ್ತವನ್ನು ತಮಗೆ ಕೆ-2 ಅಡಿಯಲ್ಲಿ "ಡಿ" ಮೋಡ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು.
04. ಬ್ಲಾಕ್ ಮಟ್ಟದ ನಿಗದಿಯಾಗಿರುವ ಮೊತ್ತವನ್ನು ಉಪನಿರ್ದೇಶಕರು (ಆಡಳಿತ) ರವರಿಗೆ ಕೆ-2 ಅಡಿಯಲ್ಲಿ "ಡಿ" ಮೋಡ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಅವರವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿ ಯವರಿಗೆ ಬಿಡುಗಡೆಯಾದ ಅನುದಾನವನ್ನು 03 ದಿನಗಳೊಳಗಾಗಿ "ಯು" ಮೋಡ್ ಬಿ.ಇ.ಓ ರವರಿಗೆ ಅಪ್‌ಲೋಡ್ ಮಾಡುವುದು.
05. ತಾಲ್ಲೂಕು ಮಟ್ಟದ ಕ್ರಿಯಾಯೋಜನೆಯನ್ನು ಉಪನಿರ್ದೇಶಕರು(ಆಡಳಿತ)ರವರು ಅನುಮೋದಿಸುವುದು.ಜಿಲ್ಲಾ ಮಟ್ಟದ ಕಾರ್ಯಕ್ರಮದ ಕ್ರಿಯಾ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿಯಿಂದ ಅನುಮೋದಿಸಿ ಆಯುಕ್ತರ ಅನುಮತಿಗಾಗಿ ಸಲ್ಲಿಸುವುದು.
06. ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಗಳ ವೆಚ್ಚದ ಬಿಲ್‌ಗಳಿಗೆ ಮೇಲು ಸಹಿಯನ್ನು ವಿಭಾಗದ ಸಹನಿರ್ದೇಶಕರು ಬ್ಲಾಕ್ ಮಟ್ಟದ ಸ್ಪರ್ಧೆಗಳ ವೆಚ್ಚದ ಬಿಲ್ಲುಗಳಿಗೆ ಆಯುಕ್ತರು/ನಿರ್ದೇಶಕರು(ಮೈನಾರಿಟಿ) ಪ್ರಸ್ತುತ ಖರೀದಿನಿಯಮಗಳಂತೆ ಪರಿಶೀಲಿಸಿ ಮೇಲುಸಹಿ ಮಾಡುವುದು.
07. ಉಪನಿರ್ದೇಶಕರು/ಕ್ಷೇತ್ರಶಿಕ್ಷಣಾಧಿಕಾರಿ ಇವರು ತಮಗೆ ಸಂಬಂಧಿಸಿದ ಖಜಾನೆಯಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾದ ಮೊತ್ತ ಆನ್‌ಲೈನ್ ಗಣಕೀಕರಣಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ನಂತರ ಖಜಾನೆಗೆ ಬಿಲ್ ಸಲ್ಲಿಸುವುದು.
08. ಪ್ರತಿಯೊಂದು ಹಂತದ ಸ್ಪರ್ಧೆಗಳನ್ನು ನಡೆಸಿದ ಕೂಡಲೇ ಜಿಲ್ಲಾ ಉಪನಿರ್ದೇಶಕರು ತಮ್ಮ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಒದಗಿಸಿದ ಹಣ ಉಪಯೋಗಿಸಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಪಡೆದು ಕ್ರೋಢೀಕರಿಸಿ ಡಿಸೆಂಬರ್ 2019 ರ ಕೊನೇ ವಾರದೊಳಗೆ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನದ ಬೇಡಿಕೆಯನ್ನು ಸಲ್ಲಿಸಬಾರದು.
09. ಒದಗಿಸಿರುವ ಹಣ ಉಳಿದಲ್ಲಿ ತಕ್ಷಣವೇ ಹಣ ಸೆಳೆದ ಖಜಾನೆಯಲ್ಲಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಮರುಪಾವತಿ ಮಾಡಿ ಈ ಕಛೇರಿಗೆ ಚಲನ್ ಪ್ರತಿ ಸಲ್ಲಿಸುವುದು.
10. ವಿದ್ಯಾರ್ಥಿಗಳು ಮತ್ತು ಶಿಕ್ಷಕರುಗಳಿಗೆ ಸಾಮಾಣ್ಯ ಬಸ್/ರೈಲುದರವನ್ನು ಮಾತ್ರ ಭರಿಸುವುದು.
11. ಈಲ್ಲಾ ಉಪನಿರ್ದೇಶಕರು ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮದ ಜಿಲ್ಲಾ ಮಡ್ಡ ಹಾಗೂ ಬ್ಲಾಕ್ ಮಟ್ಟದಲ್ಲಿ ಕ್ಷೇತ್ರಶಿಕಣಾಧಿಕಾರಿಗಳಿಗೆ ಒದಗಿಸಿರುವ ಹಣದ ಮೂಲ ವೋಚರ್‌ಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡು ಆಡಿಟ್ ಮಾಡಿಸಲು ಕ್ರಮ ವಹಿಸುವುದು ಈ ಸಂಬಂಧ ಜಿಲ್ಲಾಉಪನಿರ್ಧೇಶಕರು ತಾಲ್ಲೂಕು ಹಾಗೂ ಜಿಲ್ಲೆಗೆ ಸಂಬಂಧಪಟ್ಟ ಬಳಕೆ ಪ್ರಮಾಣಪತ್ರಗಳನ್ನು ಮಾತ್ರ ದಿನಾಂ:31.12.2019 ರೊಳಗೆ ತಪ್ಪದೆ ಈ ಕಛೇರಿಗೆ ಸಲ್ಲಿಸುವುದು.
12. ಖರೀದಿಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 2000 ಮತ್ತ ಅದರಡಿಯಲ್ಲಿನ(KTTP) ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಿದೆ.
13. ಸಂಬಂಧಿಸಿದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅನುದಾನ ಅಪ್‌ಲೋಡ್ ಮಾಡಿದ್ದನ್ನು ಕೂಡಲೇ ಡ್ರಾ ಮಾಡುವುದು ಹಾಗೂ ಡ್ರಾ ಮಾಡಿದ ಒಂದು ವಾರದೊಳಗೆ ಡ್ರಾ ಮಾಡಿದ ಬಗ್ಗೆ ಉಪನಿರ್ದೇಶಕರು(ಮೈನಾರಿಟಿ) ಇವರಿಗೆ ಕಡ್ಡಾಯವಾಗಿ ವರದಿ ಮಾಡುವುದು.

(ಕೆ.ಎಸ್.ಮಣಿ)
ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ
ಭಾಷಾ ಶಾಲೆಗಳು, ಆಯುಕ್ತರ ಕಛೇರಿ.

ಕರ್ನಾಟಕ ಸರ್ಕಾರ

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001.

<u>2019–20 ನೇ ಸಾಲಿನ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಅನುಷ್ಠಾನದ ವಿವರ</u> :–

| ಉಪನಿರ್ದೇಶಕರು (ಆಡಳಿತ) | | ಉಪನಿರ್ದೇಶಕರು ಕಛೇರಿಯ ಪತ್ರಾಂಕಿತ ಸಹಾಯಕರು | | ಪ್ರತಿಭಾ ಕಾರಂಜಿ ನೋಡಲ್ ಅಧಿಕಾರಿ ಜಿಲ್ಲಾ ಹಂತ | | ಪ್ರತಿಭಾ ಕಾರಂಜಿ ವಿಷಯ ನಿರ್ವಹಕರು | |
|---|---|---|---|---|---|---|---|
| ಹೆಸರು | ಮೊಬೈಲ್ ಸಂಖ್ಯೆ | ಹೆಸರು | ಮೊಬೈಲ್ ಸಂಖ್ಯೆ | ಹೆಸರು | ಮೊಬೈಲ್ ಸಂಖ್ಯೆ | ಹೆಸರು | ಮೊಬೈಲ್ ಸಂಖ್ಯೆ |
| | | | | | | | |
| | | | | | | | |
| | | | | | | | |

ಸೂಚನೆ:– ಮೇಲಿನ ಮಾಹಿತಿಯನ್ನು ಮರು ಟಪ್ಪಾಲಿನಲ್ಲಿ ಕಳುಹಿಸುವುದು.

ಸಹಿ ಹಾಗೂ ಮೊಹರಿನೊಂದಿಗೆ
ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
______ ಜಿಲ್ಲೆ.